# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 220 (264) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 06/07/2023 |
| ಉತ್ತರಿಸುವ ಸಚಿವರು | ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಪ್ರಧಾನ ಮಂತ್ರಿ ಶ್ರಮಯೋಗಿ ಮನ-ಧನ (PM-SYM) ಯೋಜನೆಯಡಿ ನೋಂದಾಯಿತ ವಿವಿಧ ವರ್ಗದ ಅಸಂಘಟಿತ ಕಾರ್ಮಿಕರಿಗೆ ನೀಡುವ ವೃದ್ಧಾಪ್ಯವೇತನ ಜಾರಿಗೊಳಿಸಲಾಗುತ್ತಿದಯೇ; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ (ಪಿಎಂ-ಎಸ್‌ವೈಎಂ) ಯೋಜನೆಯನ್ನು ಜಾರಿಗೊಳಿಸುತ್ತಿದ್ದು, ಈ ಯೋಜನೆಯಡಿ ವಿವಿಧ ವರ್ಗಗಳ ನೊಂದಾಯಿತ ಅಸಂಘಟಿತ ಕಾರ್ಮಿಕರು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3,000/-ಗಳ ವೃದ್ಧಾಪ್ಯ ವೇತನ ಸೌಲಭ್ಯ ಪಡೆಯಬಹುದಾಗಿದೆ. |
| ಆ) | ಹಾಗಿದ್ದಲ್ಲಿ, ಈ ಯೋಜನೆಯ ವಿವರಗಳೇನು; ಈ ಯೋಜನೆಯಡಿಯಲ್ಲಿ ನೋಂದಾಯಿತವಾಗಿರುವ ವಿವಿಧ ವರ್ಗದ ಅಸಂಘಟಿತ ಕಾರ್ಮಿಕರು ಯಾರು ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಈ ಅಸಂಘಟಿತ ಕಾರ್ಮಿಕರು ನೋಂದಾಯಿತರಾಗಿದ್ದಾರೆಯೇ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು) | ಈ ಯೋಜನೆಯ ವಿವರಗಳು ಕೆಳಗಿನಂತಿವೆ:-<br>• ಎಲ್ಲಾ ವರ್ಗಗಳ ಅಸಂಘಟಿತ ಕಾರ್ಮಿಕರು ಈ ಯೋಜನೆಯ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.<br>• ವಯೋಮಿತಿ 18-40 ವರ್ಷಗಳು.<br>• ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು.<br>• ಆದಾಯ ತೆರಿಗೆ ಪಾವತಿದಾರರಾಗಿರಬಾರದು.<br>• ಮಾಸಿಕ ವಂತಿಕೆಯ ದರವು ವಂತಿಕೆದಾರರ ವಯೋಮಾನಕ್ಕನುಗುಣವಾಗಿ ರೂ. ರೂ.55/-ರಿಂದ ರೂ.200/-ರವರೆಗೆ ಇರುತ್ತದೆ.<br>• ಕೇಂದ್ರ ಸರ್ಕಾರವು ನೋಂದಾಯಿತ ಕಾರ್ಮಿಕರಿಗೆ ಅವರು ಪಾವತಿಸಿದ ವಂತಿಕೆಯ ಆಧಾರದ ಮೇಲೆ ವಾರ್ಷಿಕವಾಗಿ ಸಮಾನಂತರ ವಂತಿಕೆಯನ್ನು ಪಾವತಿಸುತ್ತದೆ.<br>• ವಂತಿಕೆದಾರರು 60 ವರ್ಷ ಪೂರೈಸುವವರೆಗೆ ಮಾಸಿಕ ವಂತಿಕೆಯನ್ನು ಪಾವತಿಸಬೇಕಾಗಿರುತ್ತದೆ.<br>• ಫಲಾನುಭವಿಯು ನಿರಂತರವಾಗಿ ವಂತಿಕೆಯನ್ನು ಪಾವತಿಸಿದ್ದು, 60 ವರ್ಷದ ಒಳಗಾಗಿ ಮೃತಪಟ್ಟಲ್ಲಿ ಅಥವಾ ಶಾಶ್ವತ ಅಂಗ ನ್ಯೂನತೆಯಿಂದ ವಂತಿಕೆಯನ್ನು ಪಾವತಿಸಲು ಸಾಧ್ಯವಾಗದಿದ್ದಲ್ಲಿ ಅವನ/ಅವಳ ಸಂಗಾತಿಯು ಆನಂತರ ಈ ಯೋಜನೆಗೆ ಸೇರಬಹುದಾಗಿದ್ದು, ವಂತಿಕೆಯನ್ನು ಪಾವತಿಸಿ ಮುಂದುವರಿಸಬಹುದಾಗಿರುತ್ತದೆ ಅಥವಾ ಅವರ ವಂತಿಕೆಯನ್ನು ಬಡ್ಡಿಯೊಂದಿಗೆ ಪಡೆಯಲು ಅರ್ಹರಾಗಿದ್ದಾರೆ. |

| | | |
|---|---|---|
| | | • ಈ ಯೋಜನೆಯಡಿ ಇ.ಎಸ್.ಐ ಹಾಗೂ ಇ.ಪಿ.ಎಫ್ ಸೌಲಭ್ಯ ಹೊಂದಿರದ ಮತ್ತು ಆದಾಯ ತೆರಿಗೆ ಪಾವತಿಸದ ಎಲ್ಲಾ ವರ್ಗಗಳ ಅಸಂಘಟಿತ ಕಾರ್ಮಿಕರು ಯೋಜನೆಯಡಿ ನೊಂದಾಯಿಸಿಕೊಳ್ಳಬಹುದಾಗಿದೆ.<br><br>ಮೇಲ್ಕಂಡ ಯೋಜನೆಯಡಿ ನೋಂದಾಯಿತ ವಂತಿಕೆದಾರರ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ಈ ಯೋಜನೆಯಡಿ ನೋಂದಾಯಿಸಲು ಅಸಂಘಟಿತ ಕಾರ್ಮಿಕರು ಸಲ್ಲಿಸಬೇಕಾದ ದಾಖಲೆಗಳು ಯಾವುವು ಮತ್ತು ಕಾರ್ಮಿಕರಿಗೆ ದಾಖಲೆಗಳನ್ನು ಸಲ್ಲಿಸಲು ಸ್ಥಾಪಿತವಾಗಿರುವ ಸೇವಾ ಕೇಂದ್ರುಗಳು ಯಾವುವು? (ಪೂರ್ಣ ವಿವರ ನೀಡುವುದು) | ರಾಜ್ಯದಾದ್ಯಂತ ಆಯ್ಕ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲೆಗಳು ಸೇರಿದಂತೆ, ಒಟ್ಟು 9427 ಸಾಮಾನ್ಯ ಸೇವಾ ಕೇಂದ್ರುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಯೋಜನೆಯಡಿ ನೊಂದಣಿಯಾಗಲು ಎಲ್ಲಾ ವರ್ಗಗಳ ಅಸಂಘಟಿತ ಕಾರ್ಮಿಕರು ತಮ್ಮೊಂದಿಗೆ ಆರಂಭಿಕ ವಂತಿಕೆ ಮೊತ್ತ, ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಗಳ ವಿವರಗಳೊಂದಿಗೆ ಹತ್ತಿರದ ಸಾಮಾನ್ಯ ಸೇವಾ ಕೇಂದ್ರ (CSC) ಗಳಿಗೆ ಭೇಟಿ ನೀಡಿ ವಂತಿಕೆದಾರರಾಗಿ ನೋಂದಾಯಿಸಿಕೊಳ್ಳಬಹುದ್ದಾಗಿದೆ. |

**ಕಾಇ 287 ಎಲ್ ಇಟಿ 2023**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 220 (264)

'ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ (ಪಿಎಂ-ಎಸ್‌ವೈಎಂ) ಯೋಜನೆ'ಯಡಿ ನೋಂದಾಯಿತ ವಂತಿಕೆದಾರರ ಜಿಲ್ಲಾವಾರು ವಿವರ

| ಕ್ರಸಂ | ಜಿಲ್ಲೆ | ನೋಂದಣಿ |
|---|---|---|
| 1 | ಬೆಳಗಾವಿ | 12779 |
| 2 | ದಕ್ಷಿಣ ಕನ್ನಡ | 11971 |
| 3 | ಬೆಂಗಳೂರು ಗ್ರಾಮಾಂತರ | 6691 |
| 4 | ಉಡುಪಿ | 6370 |
| 5 | ಉತ್ತರ ಕನ್ನಡ | 6286 |
| 6 | ಮೈಸೂರು | 5958 |
| 7 | ಶಿವಮೊಗ್ಗ | 5422 |
| 8 | ತುಮಕೂರು | 5004 |
| 9 | ಚಿತ್ರದುರ್ಗ | 4303 |
| 10 | ಮಂಡ್ಯ | 4158 |
| 11 | ಬಳ್ಳಾರಿ | 4102 |
| 12 | ಹಾಸನ್ | 4094 |
| 13 | ಕಲಬುರ್ಗಿ | 4073 |
| 14 | ದಾವಣಗೆರೆ | 3991 |
| 15 | ವಿಜಯಪುರ | 3896 |
| 16 | ರಾಯಚೂರು | 3703 |
| 17 | ಬಾಗಲಕೋಟೆ | 3665 |
| 18 | ಬೀದರ್ | 3575 |
| 19 | ರಾಮನಗರ | 3570 |
| 20 | ಹಾವೇರಿ | 3377 |
| 21 | ಗದಗ | 3284 |
| 22 | ಧಾರವಾಡ | 3040 |
| 23 | ಚಿಕ್ಕಬಳ್ಳಾಪುರ | 2995 |
| 24 | ಕೊಪ್ಪಳ | 2975 |
| 25 | ಯಾದಗಿರಿ | 2909 |
| 26 | ಬೆಂಗಳೂರು ನಗರ | 2820 |
| 27 | ಕೋಲಾರ್ | 2632 |
| 28 | ಚಾಮರಾಜನಗರ | 2028 |
| 29 | ಚಿಕ್ಕಮಗಳೂರು | 1821 |
| 30 | ಕೊಡಗು | 1176 |
| ಒಟ್ಟು | | **132668** |